ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**KARNATAK UNIVERSITY**

*University with Potential for Excellence*

Pavate Nagar, **Dharwad**- Karnataka-India 580 003

**Publication Dept**

ಪ್ರಸಾರಾಂಗ ವಿಭಾಗ

ಕವಿವಿ:ಪ್ರಸಾರಾಂಗ:2026–27/ 70 **: ಸುತ್ತೋಲೆ :** ದಿನಾಂಕ : 29/6/26

## ಕ.ವಿ.ವಿ. ನಿಯತಕಾಲಿಕೆಗೆ ಹಾಗೂ ಕೃತಿಗಳಿಗೆ ಲೇಖನಗಳ ಆಹ್ವಾನದ ಅವಧಿ ವಿಸ್ತರಣೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗ, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಅಧ್ಯಾಪಕರ/ವಿದ್ಯಾರ್ಥಿಗಳ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ನಿಯತಕಾಲಿಕೆಗಳಿಗೆ ಸಂಶೋಧನಾತ್ಮಕ ಲೇಖನಗಳನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮರು ಆಹ್ವಾನಿಸಲಾಗಿದೆ. ಆಸಕ್ತರು ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ.ಧಾರವಾಡ ಇವರಿಗೆ ಲೇಖನಗಳನ್ನು ಸಲ್ಲಿಸಲು ದಿನಾಂಕ 30–07–2026 ರವರೆಗೆ ಅವಧಿ ವಿಸ್ತರಿಸಲಾಗಿದೆ.

| | | |
|---|---|---|
| 1 | ಕರ್ನಾಟಕ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ | ಸಂಶೋಧನಾತ್ಮಕ ಲೇಖನ/ಪುಸ್ತಕ ವಿಮರ್ಶೆ |
| 2 | ವಿದ್ಯಾರ್ಥಿ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ | ಸಂಶೋಧನಾ ಲೇಖನ/ಕತೆ/ಕವಿತೆ ವಿದ್ಯಾರ್ಥಿಗಳಿಗೆ ಮಾತ್ರ |
| 3 | ಕೆ.ಯು.ಜರ್ನಲ್ ಆಪ್ ಹ್ಯೂಮ್ಯಾನಿಟೀಸ್ – ವಾರ್ಷಿಕ ಸಂಚಿಕೆ | ಇಂಗ್ಲೀಷ್/ಹಿಂದಿ/ಮರಾಠಿ/ಸಂಸ್ಕೃತ/ಉರ್ದು/ಇತರೆ ಭಾಷೆಗಳ ಸಂಶೋಧನಾತ್ಮಕ ಲೇಖನ |
| 4 | ಕೆ.ಯು.ಜರ್ನಲ್ ಆಪ್ ಸೋಶಿಯಲ್ ಸಾಯನ್ಸ್ – ವಾರ್ಷಿಕ ಸಂಚಿಕೆ | ಈ ವಿಷಯಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿರಬೇಕು. |
| 5 | ಕೆ.ಯು.ಜರ್ನಲ್ ಆಪ್ ಸಾಯನ್ಸ್ – (ಇ–ಜರ್ನಲ್) | |

**2026–27** ನೇ ಸಾಲಿನ ಮೇಲಿನ ನಿಯತಕಾಲಿಕೆಗಳಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಲೇಖನಗಳನ್ನು **3000** ಸಾವಿರ ಶಬ್ದಗಳ **(Three Thousand Words)** ಮಿತಿಯಲ್ಲಿ ಸಿದ್ದಪಡಿಸಿ, ಪ್ರಸಾರಾಂಗಕ್ಕೆ ತಲುಪುವಂತೆ ಕಳಿಸುವುದು.

- ❖ ಕೆ.ಯು.ಜರ್ನಲ್ ಆಪ್ ಹ್ಯೂಮ್ಯಾನಿಟೀಜ್ ನಿಯತಕಾಲಿಕೆ ಲೇಖನ **A/4 Size** ನಲ್ಲಿ ಸಿದ್ಧಪಡಿಸಿ ಸಿ.ಡಿ. ಹಾಗೂ ಹಾರ್ಡ ಪ್ರತಿಯಲ್ಲಿ ಲೇಖನ ಕಳಿಸುವುದು.
- ❖ ಸೋಶಿಯಲ್ ಸಾಯನ್ಸ್ ಮತ್ತು ಸಾಯನ್ಸ್ ನಿಯತಕಾಲಿಕೆಗಳ ಲೇಖನಗಳನ್ನು **Box Formet** ನಲ್ಲಿ ಸಿದ್ಧಪಡಿಸಿ ಲೇಖಕರು ಲೇಖನಗಳ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಿಕೊಡುವುದು.
- ❖ ಕರ್ನಾಟಕ ಭಾರತಿ, ವಿದ್ಯಾರ್ಥಿ ಭಾರತಿ ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ತಮ್ಮ ಲೇಖನವನ್ನು ನುಡಿಲಿಪಿ (ಪೇಜ್‌ಮೇಕರ್–ಬುಕ್ ಫಾರ್ಮೆಟ್‌ಗೆ) ಸಿದ್ಧಪಡಿಸಿ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಬೇಕು.
- ❖ ಸದರಿ ನಿಯತಕಾಲಿಕೆಗಳು **ISSN & Refereed Journal** ಆಗಿರುವುದರಿಂದ ಲೇಖನಗಳನ್ನು ವಿಷಯಕ್ಕೆ ಸಂಬಂಧಿಸಿದ ಪರಿಣಿತರಿಂದ ಪರಿಶೀಲಿಸಿ ಪ್ರಕಟಣೆಗೆ ಯೋಗ್ಯವಾದವುಗಳನ್ನು ಮಾತ್ರ ಪ್ರಕಟಿಸಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಆ ಬಗ್ಗೆ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
- ❖ ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ಲೇಖನದ ಜೊತೆ ಕೃತಿಚೌರ್ಯ ವರದಿಯನ್ನು **(Plagiarism Report)** ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಮತ್ತು ಲೇಖನ ಸಂಬಂಧಿಸಿ ದೂರು ಅಥವಾ ಆಕ್ಷೇಪಣೆಗಳು ಬಂದಲ್ಲಿ ಲೇಖಕರೇ ಹೊಣೆಗಾರರಾಗಿರುತ್ತಾರೆ.
- ❖ ಕೆ.ಯು.ಜರ್ನಲ್ ಆಫ್ ಸಾಯನ್ಸ್ ನಿಯತಕಾಲಿಕೆಯನ್ನು ಇ–ಜರ್ನಲ್ ಆಗಿ ವೆಬ್‌ಸೈಟ್ ಮೂಲಕ ಪ್ರಕಟಿಸಲಾಗುತ್ತದೆ.
- ❖ ತಿರಸ್ಕೃತ ಲೇಖನಗಳಿಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

**2026–27** ನೇ ಸಾಲಿಗೆ ಸಂಬಂಧಿಸಿದಂತೆ ಸಂಶೋಧನಾ ಕೃತಿ, ಕಥೆ, ಕಾದಂಬರಿ, ನಾಟಕ ಸಾಹಿತ್ಯಕ್ಕೆ ಸಂಬಂಧಿಸಿದಂತ ಕೃತಿಗಳನ್ನು ಪ್ರಸಾರಾಂಗದಿಂದ ಪ್ರಕಟಿಸಲು ಆಸಕ್ತವುಳ್ಳವರು ಹಸ್ತಪ್ರತಿಯನ್ನು ಬುಕ್‌ಫಾರ್ಮೆಟ್‌ನಲ್ಲಿ ಸಿದ್ದಪಡಿಸಿ ಸಿ.ಡಿ.ಯೊಂದಿಗೆ ಸಲ್ಲಿಸುವುದು. ವಿಶ್ವವಿದ್ಯಾಲಯದ ನಿಯಮಾನುಸಾರ ಪರಿಶೀಲನೆಗೊಳಪಡಿಸಿದ ನಂತರ ಪ್ರಕಟಣೆಗೆ ಕೈಗೆತ್ತಿಕೊಳ್ಳಲಾಗುವುದು. ತಿರಸ್ಕೃತ ಪುಸ್ತಕಗಳಿಗೆ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

. ಹೆಚ್ಚಿನ ಮಾಹಿತಿಗಾಗಿ ಪ್ರೊ.ಚಂದುನವರ ಪ್ರಭಾರಿ ನಿರ್ದೇಶಕರು, ಪ್ರಸಾರಾಂಗ ವಿಭಾಗ, ಕ.ವಿ.ವಿ.ಧಾರವಾಡ ಮೊ.ನಂ. **9448560301** ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು

ಪ್ರಸಾರಾಂಗ

ಪ್ರತಿ : 1) ಮುಖ್ಯಸ್ಥರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

2) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲ ಅಧೀನ/ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ

3) ನಿರ್ದೇಶಕರು, ಐ.ಟಿ.ವಿಭಾಗ, ಕ.ವಿ.ವಿ.ಧಾರವಾಡ (ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು)